ಅಧ್ಯಕ್ಷರು : ಯಾರು ಹೇಳಿದ್ದಾರೆ? This House cannot sit on discussions on any presumptions or assumptions and the publications in newspapers do not become authenticity for us.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದು ಪೇಪರನಲ್ಲೂ ಕೂಡ ಬಂದಿದೆ.

ಅಧ್ಯಕ್ಷರು : ಈ ದೇಶದ ಪ್ರಜೆ ಎಲ್ಲಿ ಬೇಕಾದರೂ ರಾಷ್ಟ್ರಧ್ವಜವನ್ನೂ ಹೆಮ್ಮೆಯಿಂದ ತೆಗೆದುಕೊಂಡು ಹೋಗಬಹುದು. ಅದರ ಬಗ್ಗೆ ಹೆಚ್ಚು ಚರ್ಚೆ ಬೇಡ.

ಶಾಸನ ರಚನೆ

ಮೈಸೂರು (ವೈಯುಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿತಿ (ತಿದ್ದುಪಡಿ) ವಿಧೇಯಕ 1996

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ರ ಮೈಸೂರು(ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೊರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

+ ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಈ ಒಂದು ಇನಾಮತಿ ಜಮೀನುಗಳು, ಅದರಲ್ಲಿರುವ ಮರ ಮತ್ತು ಇತರೆ ನೈಸರ್ಗಿಕ ಸಂಪತ್ತನ್ನು ಕಾಪಾಡುವುದಕ್ಕೆ ಹಿಂದೆ ಒಂದು ಬಿಲ್‌ನ್ನು ಪಾಸ್ ಮಾಡಿ ಇದನ್ನು ಸನ್ಮಾನ್ಯ ರಾಷ್ಟ್ರಪತಿಗಳಿಗೆ 1992ರಲ್ಲಿ ಕಳುಹಿಸಿದರು. ಆದರೆ ಅದು ಕಾನೂನು ಬದ್ಧವಾಗಿಲ್ಲ, ರಾಜ್ಯಾಂಗಬದ್ಧವಾಗಿಲ್ಲ ಎಂದು ಸರ್ಕಾರಕ್ಕೆ ವಾಪಸ್ಸು ಬಂದಿತ್ತು. ನಂತರ 1994ರಲ್ಲಿಯೂ ಸಹ ತರಹದ ಒಂದು ಬಿಲ್ಲನ್ನು ಮಾಡಿ ಮತ್ತೆ ಕಳುಹಿಸಿ ಕೊಡಲಾಗಿತ್ತು. ಅದೂ ಸಹ ವಾಪಸ್ಸು ಬಂತು. ಆದರೆ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಸಂರಕ್ಷಣೆ ಮಾಡುವುದಕ್ಕೋಸ್ಕರ ಈ ಒಂದು ವಿಧೇಯಕವನ್ನು ಇಲ್ಲಿ ಈಗ ಮಂಡಿಸಿದ್ದೇನೆ. ಹಿಂದೆ ಇದರ ಬಗ್ಗೆ ಈ ಸದನಲ್ಲಿ ಬಹಳಷ್ಟು ಚರ್ಚೆಯಾಗಿದೆ. ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಖಿರ್ಗೆಯವರು ಹಾಗೂ ಮಾನ್ಯ ಯಡಿಯೂರಪ್ಪನವರು ಸಹ ಇದರ ಬಗ್ಗೆ ಬಹಳಷ್ಟು ಚರ್ಚೆ ಮಾಡಿ ಈ ಬಿಲ್‌ನ್ನು ಒಪ್ಪಿಕೊಂಡಿದ್ದಾರೆ. ಯಾವುದೇ ವಿಧವಾದ ಕೋರ್ಟ್ ಆರ್ಡರ್ ಇರಲಿ, ಅಗ್ರಿಮೆಂಟ್ ಇರಲಿ, ಏನೇ ಇರಲಿ, 14 'ಎ' ನಾವೇನು ಅಮೆಂಡ್‌ಮೆಂಟ್ ಸೂಚನೆ ಮಾಡಿದ್ದೇವೆ ಅದರ ಮೂಲಕ ಅಂತಹ ಕಟ್ಟುಪಾಡುಗಳಿಗೆ ಸರ್ಕಾರ ಬದ್ಧವಾಗಿಲ್ಲ. ಮತ್ತು ಸರ್ಕಾರ ಯಾವುದೇ ರೀತಿಯ ರಿಲೀಫ್ ಕೊಡುವುದಕ್ಕೂ ಕೂಡ ಬದ್ಧವಲ್ಲ ಇದರ ಬಗ್ಗೆ ಕೋರ್ಟಿನಲ್ಲಿ ಯಾವುದೇ ಒಂದು

ಕೇಸ್ ನಡೆದರೂ ಕೂಡ they shall stand abetted. ಇದನ್ನು ನಾನು ಮಂಡಿಸಿದ್ದೇನೆ. ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

+ ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಅಧ್ಯಕ್ಷರೇ, ಇದರ ಉದ್ದೇಶ ಬಹಳ ಚೆನ್ನಾಗಿದೆ. ಈ ಬಿಲ್ ಮೊದಲು ಪಾಸ್ ಮಾಡಿದ್ದುದು 1954ರಲ್ಲಿ, ಎಂದರೆ 42 ವರ್ಷಗಳಾಯಿತು. ಸರ್ಕಾರ ಇದನ್ನು ಇಷ್ಟು ವರ್ಷ ಏಕೆ ಜಾರಿಗೆ ತರದೆ ಇಟ್ಟುಕೊಂಡಿತ್ತು ಎಂದು ನನ್ನ ಪ್ರಶ್ನೆ. ಎರಡನೆಯದಾಗಿ ಮಳೆ ನಿಂತರೂ ಮರದಲ್ಲಿ ಹನಿ ನಿಲ್ಲುವುದಿಲ್ಲ ಎಂದ ಹಾಗೆ ನೀವು ಇನಾಮು ರದ್ದಿಯಾತಿ ಮಾಡಿದಾಗ ಆಗಲೇ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಇದು ಬಹಳ ತಡವಾಯಿತು. ಇದರಿಂದ ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಲುಕ್ಸಾನಾಗಿದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ತಾವು ಈ ರದ್ದಿಯಾತಿ ಏನು ತಂದಿದ್ದೀರಿ, ತರುವಾಗ ಒಂದು ವಿಷಯ ಹೇಳಿದ್ದೀರಿ, "ಸಂವಿಧಾನದ 48ನೇ ಅನುಚ್ಛೇದದಲ್ಲಿ ವಿಷಧ ಪಡಿಸಿರುವ ನಿರ್ದೇಶಕ ತತ್ವಗಳಲ್ಲಿ ಇರುವಂತೆ ಪರಿಸರ ಸಂರಕ್ಷಣೆ ಮತ್ತು ಸುಧಾರಣೆ ಮಾಡುವ ಹಾಗೂ ಅರಣ್ಯ ಮತ್ತು ವನ್ಯ ಜೀವಿಗಳ ರಕ್ಷಣೆ ಮಾಡುವ ಉದ್ದೇಶಕ್ಕಾಗಿ ಕಾನೂನನ್ನು ಅಧಿನಿಯಮಗೊಳಿಸುವುದು ಅವಶ್ಯಕವೆಂದು ಭಾವಿಸಲಾಗಿದೆ. "ಇದನ್ನು ನಾನು ಒಪ್ಪಿಕೊಂಡೆ. ಇದನ್ನು 48 'ಎ' ಕಾನ್ಸಿಟಿಟ್ಯೂಷನ್‌ನಲ್ಲಿ ತರದಿದ್ದಾರೆ. Under Directive Principles of the State Policy. ನಾನು ತಮಗೆ ಕೇಳುತ್ತೇನೆ ಆರ್ಟಿಕಲ್ 36ರಿಂದ ಆರ್ಟಿಕಲ್ 51ರವರೆಗೂ, 16 ಆರ್ಟಿಕಲ್ಸ್ ಏನಿವೆ ಅದರಲ್ಲಿ ಇರುವುದನ್ನೆಲ್ಲಾ ಅಂದರೆ ಅದೇ ರೀತಿ ಬೆಲೆಗಳನ್ನು ತಾವು ಏಕೆ ತರುವುದಿಲ್ಲ. ಇದರಲ್ಲಿ 48'ಎ' ಒಂದೇ ಒಂದು ತಂದಿದ್ದೀರಿ. ಇನ್ನು ಉಳಿದಿದ್ದೆಲ್ಲಾ ಇದೆಯಲ್ಲಾ under directive principles of the State Policy. ಅದರ ಕಡೆ ತಾವು ಏಕೆ ಇದೇ ರೀತಿ ಗಮನಹರಿಸಿಲ್ಲ. ಅವು ಇದಕ್ಕಿಂತ ಪ್ರಾಮುಖ್ಯವಾದುವು ಮತ್ತು ಸಮಾಜಕ್ಕೆ ಒಳ್ಳೆಯದಾಗತಕ್ಕಂಥ ಬಿಲ್ಲುಗಳು. ಅದನ್ನೂ ಕೂಡ ಇದೇ ರೀತಿ ತರುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ಮಂತ್ರಿಗಳಿಂದ ನಿರೀಕ್ಷೆ ಮಾಡುತ್ತೇನೆ.

1.50 ಪಿ.ಎಂ.

ಮತ್ತೊಂದು ವಿಚಾರ ತಾವು ಹೇಳಿದ್ದೀರಿ. "ರಾಜ್ಯಪಾಲರು ವಿಧೇಯಕವನ್ನು ರಾಷ್ಟ್ರಪತಿಗಳ ಪರಿಶೀಲನೆಗಾಗಿ ಕಾಯ್ದಿರಿಸಿದ್ದರೂ, ವಿಧೇಯಕದ ಘೋಷಣಾ ಖಂಡದಲ್ಲಿ ಕೋರಲಾದ ಸಂವಿಧಾನದ 31ಸಿ ಅನುಚ್ಛೇದದ ಅಡಿಯಲ್ಲಿ ರಕ್ಷಣಾ ಲಭ್ಯವಿಲ್ಲವೆಂಬ ಕಾರಣಕ್ಕಾಗಿ ರಾಷ್ಟ್ರಪತಿಗಳು ಸದರಿ ವಿಧೇಯಕಕ್ಕೆ ಸಮ್ಮತಿ ನೀಡುವುದನ್ನು ತಡೆಯಿಡಿದರು." ನಾನು ಈ ಸಂದರ್ಭದಲ್ಲಿ ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಅದೇ 31ರ ಅಡಿಯಲ್ಲಿ ಲ್ಯಾಂಡ್ ರಿಫಾರ್ಮ್ಸ್ ಬಿಲ್ ಬಂದಾಗ ಅದನ್ನು even though law is protected under Ninth Schedule. ತಾವು ಅದನ್ನು ರಾಷ್ಟ್ರಪತಿಗಳಿಗೆ ಕಳುಹಿಸಿಲ್ಲ. ಇದನ್ನು ನಾನು ಏಕೆ ಹೇಳುತ್ತೇನೆ ಎಂದರೆ, ಅನಾಮಲಿ ಇಂತಹದ್ದು ಆಗಬಾರದು

ಎಂದು ಹೇಳುತ್ತೇನೆ. ಇದು ಆಕ್ಟನಲ್ಲಿ ಇಲ್ಲದಿದ್ದರೂ ಕೂಡ, ಷೆಡ್ಯೂಲ್‌ನಲ್ಲಿ ಇಲ್ಲದಿದ್ದರೂ ಕೂಡ, ಇವೊತ್ತು ಅವರ ವ್ಯಾಪ್ತಿಗೆ ಬರದಿದ್ದರೂ ಕೂಡ, ತಾವು ಇದನ್ನು ಕಳುಹಿಸಿದ್ದೀರಿ. ಇದರ ಉದ್ದೇಶ ಏನು? ನಾನು ಹೇಳುತ್ತಿರುವುದು ಏನೆಂದರೆ, ಯಾವುದನ್ನೂ ಕಳುಹಿಸಿಬೇಕೋ ಅದನ್ನು ಕಳುಹಿಸುವುದಿಲ್ಲ, ಸಂವಿಧಾನದಲ್ಲಿ ಇದು ಕ್ಲಿಯರ್ ಆಗಿದೆ. ಯಾವುದನ್ನು ತಾವು ಕಳುಹಿಸಬಾರದು ಯಾವುದು ಸಬ್ಜೆಕ್ಟ್ ಅಲ್ಲವೋ ಅದನ್ನು ತಾವು ಕಳುಹಿಸಿದ್ದೀರಿ. It should be done according to law, according to social justice. ಸೋಷಿಯಲ್ ಜಸ್ಟೀಸ್ ಬಹಳ ಮುಖ್ಯವಾದುದು. ದಯವಿಟ್ಟು ಇದನ್ನು ಮಾಡಿ. ಆಮೇಲೆ ತಂದಿರತಕ್ಕಂಥದ್ದು ಬರೀ ಅರಣ್ಯಕ್ಕೆ ಮಾತ್ರ ತಂದಿದ್ದೀರಿ. ಅದು ನಿಜ. ಈ ಸಂದರ್ಭದಲ್ಲಿ ಈ ಆಕ್ಟ್‌ನ ತಿದ್ದುಪಡಿ ಬಹುಶ: ಯಾವುದೋ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಸರ್ಕಾರಕ್ಕೆ ಫೇವರ್ ಆಗಿಲ್ಲ ಎಂದು ಇದನ್ನು ತೆಗೆದುಕೊಂಡು ಬಂದಿದ್ದೀರಿ. ಆದರೆ ಸರ್ಕಾರ ರೆವಿನ್ಯೂ ದೃಷ್ಟಿಯಿಂದ ಇದು ಸರಿಯಾಗಿದೆ. ಇನ್ನು ಮುಂದಾದರು ಕೂಡ ಇಂತಹವರನ್ನು ತರಬೇಕಾದರೆ ತಾವೇ ಇದರಲ್ಲಿ ಆರ್ಟಿಕಲ್ಸ್ ಎಲ್ಲಾ ಬಹಳ ಕ್ಲಿಯರ್ ಆಗಿ ಹಾಕಿಬಿಟ್ಟಿದ್ದೀರಿ ಬಹಳ ಚೆನ್ನಾಗಿದೆ, ನಾನು ಸಂತೋಷ ಪಟ್ಟೆ. ಇವು ಎಲ್ಲವನ್ನೂ ನೀವು ಹೀಗೆ ತರುವುದಾದರೆ ನಾನು ಬಹಳ ಸಂತೋಷ ಪಡುತ್ತೇನೆ. ಈ ಬಿಲ್ಲನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ಸ್ವಾಗತ ಮಾಡುತ್ತಾ, ಇದರ ಹಿಂದೆಯೂ ಕೂಡ ಇದರ ಬಗ್ಗೆ ಯೋಚನೆ ಮಾಡಿತ್ತು. ಆದರೆ ಮಾನ್ಯ ರೆವಿನ್ಯೂ ಸಚಿವರು ಹೇಳಿದ ಹಾಗೆ ಅಸೆಂಟ್ ಬರಲಿಲ್ಲ. ಅದಕ್ಕಾಗಿ ಈ ಒಂದು ಆರ್ಟಿಕಲ್ 31(ಸಿ) ಕೆಳಗೆ ಪುನ: ಕಳುಹಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಈಗಾಗಲೇ ನಾವು ಆರ್ಟಿಕಲ್ 31(ಸಿ) ಕೆಳಗೆ ಪ್ಯಾಲೆಸ್‌ದನ್ನು ಕೂಡ ಅದೇ ರೀತಿಯಾಗಿ ತಾವು ಕಳುಹಿಸುತ್ತಿದ್ದೀರಿ. ನಾನು ಮೊನ್ನೆಯು ಕೂಡ ಹೇಳಿದೆ. ಒಂದು ಸಾರಿ ನಾವು ಕಳುಹಿಸಿದ ಮೇಲೆ ಇದರ ಬಗ್ಗೆ ಯಶಸ್ವಿಯಾಗಿ ಪ್ರಯತ್ನ ಪಟ್ಟು ಅಸೆಂಟ್ ತರತಕ್ಕಂಥದ್ದದು ಬಹಳ ಮುಖ್ಯ. ಕೇವಲ ನಾವು ಪಾಸ್ ಮಾಡಿಕೊಂಡು ಇಟ್ಟರೆ..... ಹಿಂದೆಯೂ ಕೂಡ ಎರಡುಮೂರು ಸಾರಿ ಈ ರೋರಿಚದು ಆಗಲೀ, ಪ್ಯಾಲೆಸದು ಆಗಲೀ, ಪುನ: ಇದೂ ಕೂಡ ಅದೇ ರೀತಿಯಾಗಿ ಉಳಿದರೆ, ಈ ಮಧ್ಯೆ ಏನಾಗುತ್ತದೆ ಎಂದರೆ ಬೇರೆ ಬೇರೆ ಜನ ಎಲ್ಲಾ ಗಿಡಗಳನ್ನು ಕಡಿದುಕೊಂಡು ಹೋಗತಕ್ಕಂಥದ್ದು ಅಥವಾ ತಮ್ಮ ತಮ್ಮ ಹೊಸ ರೈಟ್ಸ್‌ನ್ನು ಕ್ರಿಯೆಟ್ ಮಾಡತಕ್ಕಂಥದ್ದು ಈ ಮಧ್ಯೆದಲ್ಲಿ ಹುಟ್ಟುತ್ತವೆ. ಮತ್ತು ಕೆಲವು ಕಡೆ ಏನಾಗುತ್ತದೆ ಎಂದರೆ, ಎಲ್ಲಿ ಸರ್ಕಾರ ಆಸಕ್ತಿ ವಹಿಸುವುದಿಲ್ಲ. ಅಂತಹ ಕಡೆ ಈ ಬೊಗಸ್ ಡ್ಯಾಕುಮೆಂಟ್ ಬಹಳ ಬರುತ್ತಾ ಇವೆ. ಕೆಲವು ಜನ ಅಂತೂ ನೂರಾರು ವರ್ಷಗಳ ದಾಖಲೆಗಳನ್ನು ತಂದು ತಮ್ಮ ಕ್ಲೈಮನ್ನು ಹಾಕತಕ್ಕಂಥದ್ದು ಮತ್ತು ಕೋರ್ಟಿನಲ್ಲಿ ಆ ಕೇಸ್ ಬಂದರೆ just consent type ಇವರು ಹಾಕಿದಂತೆ ಮಾಡಬೇಕು, ಅಧಿಕಾರಿಗಳು ಒಪ್ಪಬೇಕು, ಆಮೇಲೆ ಒಂದು ಡಿಕ್ರಿ ಆಗಬೇಕು. ಆ ಡಿಕ್ರಿಯನ್ನು execute ಮಾಡುವುದಕ್ಕೆ ಸರ್ಕಾರಕ್ಕೆ ತಂದುಕೊಡುವುದು.

ಸರ್ಕಾರದಲ್ಲಿ ಅಂದರೆ ಅಧಿಕಾರದಲ್ಲಿ ಯಾರೇ ಇರಬಹುದು, ನಾನು ಇರಬಹುದು, ನೀವು ಇರಬಹುದು ಆಗ ಏನಾಗುತ್ತದೆ ಅಧ್ಯಕ್ಷರೇ, ಕೋರ್ಟ್ ಆರ್ಡರ್ ಇಂಪ್ಲಿಮೆಂಟ್ ಮಾಡುತ್ತಾರೆ. ಅಂದರೆ ಅದರ ಹಿನ್ನೆಲೆ ಏನು? ಅದಕ್ಕೆ ಟೈಟಲ್ ಇದೆಯೋ ಇಲ್ಲವೋ ವ್ಯಾಲಿಡ್ ಟೈಟಲ್ ಕಂಡುಹಿಡಿದು ಇವೊತ್ತು ಬಂದಿದೆ. ಆದರೆ ಇಂತಹ ಕೇಸಸ್ ಎಷ್ಟಿವೆ ಏಕೆಂದರೆ, ಬೆಂಗಳೂರಿನಲ್ಲೂ ಕೂಡ ಅನೇಕ ನಡೆದಿವೆ. ಯಾವುದೋ ಒಂದು ಕೆರೆ, ಆ ಕೆರೆಯ ಹಿಂದೆ ಯಾರಾದರೂ ಒಬ್ಬರು ಓನರ್ ಇದ್ದರೆ ಅಥವಾ ಇನಾಂದಾರ್ ಇದ್ದರೆ, ಜಾಗೀದಾರ್ ಇದ್ದರೆ ಅವನ ಹೆಸರಿನಲ್ಲಿ ಒಂದು ಡಾಕ್ಯುಮೆಂಟ್ ಕ್ರಿಯೇಟ್ ಮಾಡುವುದು ಇದು ನನಗೆ ಮಾರಿದ್ದಾರೆ ಎಂದು ಪುನ: ಅದನ್ನು ಮ್ಯುಟೇಷನ್ ಮಾಡಿಕೊಳ್ಳುವುದು. ಮ್ಯುಟೇಷನ್ ಮಾಡಿಕೊಂಡ ಮೇಲೆ ಯಾರೋ ಸರ್ಕಾರದವರು ತಕರಾರು ತೆಗೆಯುತ್ತಾ ಇದ್ದಾರೆ ಎಂದು ಹೇಳಿ ಅವರ ಮೇಲೆ ಕೇಸ್ ಹಾಕಿ ಹತ್ತಾರು ವರ್ಷ ನಡೆಸಿಕೊಂಡು ಒಂದು ಡಿಕ್ರಿ ಆದ ಮೇಲೆ ಎಕ್ಸಿಕ್ಯೂಟ್ ಮಾಡಲು ಹಾಕುತ್ತಾರೆ. ಇಂತಹ ಕೇಸು ನಡೆಯುತ್ತಿವೆ. ವ್ಯಾಲ್ಯೂಬಲ್ ಪ್ರಾಪರ್ಟಿಯನ್ನು ಇವೊತ್ತಿನ ದಿವಸ ಬೇರೆಯವರು ಕಬಳಿಸತಕ್ಕಂಥ ಪ್ರಯತ್ನವನ್ನು ಬುದ್ಧಿ ಜೀವಿಗಳೇ ಮಾಡುತ್ತಿದ್ದಾರೆ. ಬೇರೆ ಇನಾಮಾತಿ ಅಂತ ಇಂತ ಜಮೀನು ಬರುವುದಿಲ್ಲ. ಈ ಕ್ರುಕೇಡ್ ಫೆಲೋಸ್ ಏನು ಇರುತ್ತಾರೆ, ಎಜುಕೇಟೆಡ್ ಕ್ರುಕೇಡ್ಸ ಏನು ಇರುತ್ತಾರೆ ಅವರೇ ಇದನ್ನು ದುರುಪಯೋಗ ಮಾಡಿಕೊಳ್ಳತಕ್ಕಂಥ ಸಾಧ್ಯತೆ ಇದೆ. ಅದಕ್ಕಾಗಿ ದಯವಿಟ್ಟು ಇಂತಹ ಕೇಸಸ್ ಎಲ್ಲಿ ಇವೆ ಎಂಬುದನ್ನು ತಾವು ಕಂಡುಹಿಡಿದು ಅದರ ಬಗ್ಗೆ ಒಂದು ಕನ್ಸಾಲಿಡೇಟೆಡ್ ಬಿಲ್ ತರತಕ್ಕಂಥದ್ದು ಕೂಡ ಮಾಡಬೇಕು. ಇದನ್ನು ನಾನು ಸ್ವಾಗತ ಮಾಡುತ್ತೇನೆ, ಇದನ್ನು ಪಾಸ್ ಮಾಡುಬಹುದು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ಎರಡನೇ ಬಾರಿಗೆ ಈ ವಿಧೇಯಕ ಬಂದಿದೆ, ಇದು ಜರೂರಾಗಿ ಈ ಸದನದ ಅನುಮೋದನೆಯನ್ನು ಪಡೆದು ಜಾರಿಗೆ ಬರಬೇಕಾಗಿದೆ. ಇದು ನಮ್ಮ ತಾಲ್ಲೂಕಿನ ಒಂದು ಗ್ರಾಮಂದಿಂದಲೆ ಉದ್ಭವವಾದಂಥ ಸಮಸ್ಯೆ. ತಮಗೆ ಗೊತ್ತಿದೆ. ಇನಾಮು ರದ್ದಿಯಾತಿ ಕಾನೂನು 1956ರಲ್ಲಿ ಜಾರಿಗೆ ಬಂತು. ಆ ಪರ್ಸನಲ್ ಮತ್ತು Misc.Inam Abolition Act ಎಂದು ಹೇಳಿದರೆ ಕೆಲವು ಸರ್ವೆ ನಂಬರುಗಳು ಇನಾಮುದಾರರು ಇದ್ದರು, ಗ್ರಾಮಗ್ರಾಮಗಳಲ್ಲಿ ಇನಾಮುದಾರರು ಕೂಡ ಇದ್ದರು. ಇನಾಮು ರದ್ದಿಯಾತಿ ಕಾನೂನು ಜಾರಿಗೆ ಬಂದಾಗ ಎಲ್ಲಾ ಇನಾಮು ಭೂಮಿಗಳು ಸರ್ಕಾರದ ವಶಕ್ಕೆ ಬಂತು. They all vested with the Government from the Government from the date notification ಎಫೆಕ್ಟಗೆ ಬಂದಾಗಿನಿಂದ ಆ ಎಲ್ಲಾ ಇನಾಮು ಜಮೀನುಗಳು ಸರ್ಕಾರದ ಈ ಇನಾಮು ರದ್ದಿಯಾತಿ ಕಾನೂನುನ್ನು ಜಾರಿಗೆ ಕೊಡುವುದಕ್ಕಿಂತ ಮುಂಚಿತವಾಗಿ ಏನಾದರೂ ಇನಾಮುದಾರರು ಯಾವುದಾದರೂ ಅಗ್ರಿಮೆಂಟನ್ನು ಮಾಡಿಕೊಂಡಿದ್ದರೆ, ಅದು ಅರಣ್ಯಕ್ಕೆ ಸಂಬಂಧಪಟ್ಟಿದ್ದಾಗಿದಬಹುದು, ಖಾಸಗಿ ಸಂಪತ್ತಿಗೆ ಸಂಬಂಧಪಟ್ಟಿದ್ದಾಗಿಬಹುದು ಅಥವಾ ಏನಾದರೂ ಜಲಚರಕ್ಕೆ ಸಂಬಂಧಪಟ್ಟಿದ್ದಾಗಿರಬಹುದು

ಯಾವುದಾದರೂ ಹಕ್ಕುಬಾಧ್ಯತೆಯನ್ನು ಅಂತಹ ಒಂದು ಅಗ್ರಿಮೆಂಟ್ ಮುಂಖಾಂತರ - ನಿರ್ಮಿಸಿ ಕೊಟ್ಟ ಸಂಧರ್ಭದಲ್ಲಿ ಅದರಿಂದ ದೊರೆಯಬಹುದಾದಂಥ, ಹಕ್ಕುಬಾಧ್ಯತೆಗಳು ಊರ್ಜಿತವಾಗತಕ್ಕಂದ್ದು, ಅವುಗಳನ್ನು ಪ್ರಶ್ನೆ ಮಾಡತಕ್ಕಂಥದ್ದಲ್ಲ ಅನ್ನತಕ್ಕಂಥ ಒಂದು ನಿಯಮ ಆ ಕಾನೂನಿನಲ್ಲಿ ಅಡಕವಾಗಿತ್ತು. ನಮ್ಮ ಗೌತಮಪುರ ಅಂತೇಳಿ ಒಂದು ಇನಾಮು ಗ್ರಾಮ. ಅಲ್ಲಿ ಸುಮಾರು 4-5 ಸಾವಿರ ಎಕರೆ ಇರತಕ್ಕಂಥದ್ದು. ಅದರಲ್ಲಿ ಬಹಳ ಜನ ಗೇಣಿದಾರರು ಸಾಗುವಳಿ ಮಾಡಿದ್ದರು. ಮತ್ತು ಕೆಲವು ಜಮೀನು ಅಂದರೆ ಸಾವಿರಾರು ಎಕರೆ ಪ್ರದೇಶ ಗೋಮಾಳ ಮತ್ತು ಸಣ್ಣ ಪ್ರಮಾಣದ ಅರಣ್ಯ ಯಾರೇ ಸಾಗುವಳಿ ಇಲ್ಲದೆಯೆ ಅದು ಹಾಗೇಯೇ ಇತ್ತು. ಅಂತೂ ಅದು ಗೌತಮಪುರ ಒಂದು ಇನಾಮು ಗ್ರಾಮ ಎಂದು ಗೇಣಿದಾರರು ಭೂಮಿಯಲ್ಲಿ ಗೇಣಿದಾರರಿಗೆ ಹೋಯಿತು, ಆಮೇಲೆ ಇನಾಮುದಾರರಿಗೆ ಕೂಡ ನಾವು ಮಾಡಿದ್ದೇವೆಂದು ಕೆಲವು ಭೂಮಿಯನ್ನು ಅವರು Kadim tenant ಎಂದು ಅವರೂ ಮಂಜೂರು ಮಾಡಿಬಿಟ್ಟರು. ಈ ಬಂಜರು ಭೂಮಿ ಇತ್ತಲ್ಲ ಯಾರೂ ಸಾಗುವಳಿ ಮಾಡದೆ ಇರತಕ್ಕಂಥ ಅರಣ್ಯ ಮತ್ತು ಗೋಮಾಳ ಇತ್ತಲ್ಲ ಈ ಭೂಮಿಯಲ್ಲಿ ಹೇರಳವಾದಂಥ ಅರಣ್ಯಸಂಪತ್ತು ಇದೆ. ಆ ಭೂಮಿಯಲ್ಲಿ ಇರತಕ್ಕಂಥ ಅರಣ್ಯಸಂಪತ್ತು ನಾನು ಬೇರೆಯವರಿಗೆ ಮಾರಾಟ ಮಾಡಿದ್ದೇನೆ ಎಂದು ಹೇಳಿ ಒಂದು ಅಗ್ರಿಮೆಂಟ್ ಹುಟ್ಟಿಬಿಟ್ಟಿತು. ಅದು ತಕ್ಷಣ ಹುಟ್ಟುಲಿಲ್ಲ, ಒಂದು 4-5 ವರ್ಷ ಆದಮೇಲೆ ಆ ಅಗ್ರಮೆಂಟ್ ಪ್ರಕಾರವಾಗಿ ಈ ಕಾನೂನಿನಲ್ಲಿ ಇದ್ದಂಥ ಅವಕಾಶವನ್ನು ಉಪಯೋಗ ಮಾಡಿಕೊಂಡು ಹಳೆಯ ಒಂದು ಅಗ್ರಿಮೆಂಟ್ ರಿಜಿಸ್ಟರ್ ಅಗ್ರಿಮೆಂಟಲ್ಲ, ಅನರಿಸ್ಟಾರ್ ಅಗ್ರಿಮೆಂಟ್ ಬೇಸಿನ್ ಮೇಲೆ ಅರಣ್ಯ ಇಲಾಖೆಗೆ ಹೋಗಿ ಇರತಕ್ಕಂಥ ಮರಗಳ ಸಂಪತ್ತನ್ನು ಕಡಿಯುವುದಕ್ಕೆ ನನಗೆ ಅನುಮತಿ ಕೊಡಬೇಕೆಂದು ಅಗ್ರಿಮೆಂಟು ಪಡೆದಿರತಕ್ಕಂಥವನು ಹೋಗಿ ಅರ್ಜಿ ಕೊಟ್ಟ. ಅವರು ನಿರಾಕರಿಣೆ ಮಾಡಿದರು, ಸರ್ಕಾರದವರೂ ನಿರಾಕರಣೆ ಮಾಡಿದರು. ಕೊನೆಗೆ ಅದನ್ನು ಪ್ರಶ್ನೆ ಮಾಡಿ ಈ ಎಲ್ಲಾ ಕೆಳಹಂತದ ಅಧಿಕಾರಿಗಳ ತೀರ್ಮಾನವನ್ನು, ಸರ್ಕಾರದ ತೀರ್ಮಾನವನ್ನು ಪ್ರಶ್ನೆ ಮಾಡಿ ಯಾರು ಅಗ್ರಿಮೆಂಟನ್ನು ಬರೆಸಿಟ್ಟು ಕೊಂಡಿದ್ದರೋ ಅವರು ಹೈಕೋರ್ಟಿಗೆ ಹೋದರು. ಹೈಕೋರ್ಟಿನಲ್ಲಿ ಒಂದು ತೀರ್ಮಾನ ಆಯಿತು, ಇಲ್ಲ ಆಗ ಅಗ್ರಿಮೆಂಟ್ ಮಾಡಿಕೊಂಡಿದ್ದರೆ ಅದರ ಪ್ರಾಕಾರ ಒಂದು ಹಕ್ಕು ಅವನಿಗೆ ಬಂದಿದ್ದರೆ ಅದು ಊರ್ಜಿವಾತಕ್ಕಂಥದ್ದು, ಅದು ಪ್ರಶ್ನೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೈಕೋರ್ಟಿನವರೂ ಹೇಳಿದರು, ಸುಪ್ರೀಂಕೋರ್ಟಿನವರೂ ಹೇಳಿದರು. ಆ ಸಂದರ್ಭದಲ್ಲಿ ಕಂದಾಯ ಸಚಿವರಾದ ಖಿರ್ಗೆಯವರು ಇದ್ದರು. ಇದೂ ನಿಮಗೆ ಗೊತ್ತು. ಅವರೂ ಬಂದರು ಎಲ್ಲರೂ ಬಂದರು, ಅಲ್ಲಿ ನಮಗೂ ಕೂಡ ಇದರ ಅಂತರಂಗ ಗೊತ್ತಾಗಲಿಲ್ಲ. ಅಲ್ಲಿ ಮರಗಳನ್ನೆಲ್ಲಾ ಅವರು ಕಡಿಯುವುದಕ್ಕೆ ಅನುಮತಿ ಕೊಡಬೇಕೆಂದು ಯಾವಾಗ ಕೇಳಿದರು ಮತ್ತು ಮರಗಳನ್ನು ಕಡಿಯುವುದಕ್ಕೆ ಶುರು ಮಾಡಿದರೊ ಆವಾಗ ಸಹಜವಾಗಿ ಗದ್ದಲ ಹುಟ್ಟಿತು. ಆಗ ಎಲ್ಲಾ ಪರಿಶೀಲನೆ ಮಾಡಿದಮೇಲೆ ಇದಕ್ಕೆ ಪರಿಹಾರ ಎಂದು ಹೇಳಿದರೆ ತಿದ್ದುಪಡಿ ತರತಕ್ಕಂಥದ್ದು ತಿದ್ದುಪಡಿ ಪರಿಹಾರ, ಬಹುಶ:

ಇನಾಮು ರದ್ದಿಯಾತಿ ಕಾನೂನು ಪ್ರಕಾರ ಇದು ಒಂದು ನಮ್ಮ ಕಣ್ಣಿಗ ಬಿದ್ದಂಥ ಗ್ರಾಮ ಅದರೂ ಇಂಥ ಅನೇಕ ಕಡೆಗಳಲ್ಲಿ, ನಮ್ಮ ಏರ್ಗೆಯವರು ಹೇಳಿದ ರೀತಿಯಲ್ಲಿ ಅದು ಕೆರೆ ಇರಬಹುದು ಅಥವಾ ಖಾಸಗಿ ಸಂಪತ್ತು ಇರಬಹುದು ಅಥವಾ ಜರಚರ ಇರತಕ್ಕಂಥ ಸಂಪತ್ತು ಇರಬಹುದು, ಈ ಏನೇ ಕಾರಣದಿಂದ, ಯಾವುದಾದರೂ ಕಾರಣದಿಂದ ಒಂದು ಅಗ್ರಿಮೆಂಟನ್ನು ಮಾಡಿಕೊಂಡಿದ್ದರೆ ಆ ಅಗ್ರಿಮೆಂಟ ಪ್ರಕಾರವಾಗಿ ಅನಾವಶ್ಯಕವಾಗಿ ಲಾಭ ಮಾಡಿಕೊಳ್ಳುತಕ್ಕಂಥ ಸನ್ನಿವೇಶ ಉಂಟಾಗಿದೆ ಎಂದು ತಿಳಿದುಕೊಂಡು ಈ ಒಂದು ಇನಾಮು ರದ್ದಿಯಾತಿ ಕಾನೂನಿನ ಸೆಕ್ಷನ್ 14ಕ್ಕೆ ಒಂದು ತಿದ್ದುಪಡಿ ತಂದರೆ ಹೈಕೋರ್ಟ ಮತ್ತು ಸುಪ್ರೀಂಕೋರ್ಟ ಕೊಟ್ಟಂಥ ತೀರ್ಮಾನವನ್ನು ನಾವು ನಿವಾರಣೆ ಮಾಡಿಕೊಳ್ಳುವದಕ್ಕಾಗುತ್ತದೆ ಮತ್ತು ಈ ಸಂಪತ್ತುನ್ನು ಸರ್ಕಾರಕ್ಕೆ ವಹಿಸಿಕೊಡುವುದಕ್ಕಾಗುತ್ತದೆ ಎನ್ನುವ ಒಂದೇ ಉದ್ದೇಶದಿಂದ ಈ ಒಂದು ತಿದ್ದುಪಡಿಯನ್ನು ತಂದಿರತಕ್ಕಂಥದ್ದು. ಇದರಿಂದ ನೂರಾರು ಎಕರೆಯಲ್ಲಿರತಕ್ಕಂಥ ಅರಣ್ಯ ಸಂಪತ್ತು ಉಳಿಯುತ್ತದೆ.

ಬೇರೆ ಭಾಗಗಳಲ್ಲಿ ಯಾವುದೇ ಕಾರಣದಿಂದ ಅಗ್ರಿಮೆಂಟ್ ಸೃಷ್ಟಿಯಾಗಿದ್ದರೆ, ಅವರು ಕೂಡ ನಮಗೆ ಹಕ್ಕುಭಾದ್ಯತೆ ಇದೆಯೆಂದು ಕೇಳಿ ಸರ್ಕಾರಕ್ಕೆ ಸೇರಿದಂತಹ ಸಾರ್ವಜನಿಕ ಸ್ವತ್ತನ್ನು ಲೂಟಿ ಹೊಡೆಯುವಂಥದ್ದಕ್ಕೆ ಅವಕಾಶವಾಗುತ್ತದೆ. ಅದ್ದರಿಂದ ಈ ತಿದ್ದುಪಡಿ ಬಹಳ ಯೋಗ್ಯವಾದಂಥದ್ದು, ಇದು ಆದಷ್ಟು ಬೇಗ ಆಗಬೇಕಾದಂಥದ್ದು. ಏಕೆಂದರೆ ನಮಗೆ ತೊಂದರೆಯಾಗಿದೆ. ಅವರು ನಮ್ಮ ಹತ್ತಿರ ಬಂದು ನಮಗೆ ಕಾನೂನಿನ ಪ್ರಕಾರ ಹಕ್ಕಿದೆ ಅವರು ಕೊರುವುದಿಲ್ಲ. ಎಂದು ಹೇಳುವುದು. ಇಲ್ಲಿ ಊರಿನ ಜನರು ಲೂಟಿ ಹೊಡೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಿರಾ ಎಂದು ಹೇಳುವುದು. ನಾವು ಕೋರ್ಟಿನ ತೀರ್ಪನ್ನು ಸಹ ನಿರಾಕರಣೆ ಮಾಡುವುದಕ್ಕೆ ಆಗುವುದಿಲ್ಲ. ಅದುದರಿಂದ ಈ ಕಾನೂನಿನ ತಿದ್ದುಪಡಿಯು ಅನಿವಾರ್ಯವಾಗಿತ್ತು. ಇದನ್ನು ಮಂಜೂರಾತಿ ಮಾಡುವುದರಿಂದ ಸಾರ್ವಜನಿಕ ಮತ್ತು ಕಾನೂನಿನ ಪ್ರಕಾರ ಪಡೆಯುವಂಥವರಿಗೆ ಕೂಡ ಸುಲಭವಾಗುತ್ತದೆ. ಆ ದೃಷ್ಟಿಯಿಂದ ಇದನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರುಗಳು ಇದನ್ನು ಸ್ವಾಗತಿಸಿ ಸಹಮತಿಯನ್ನು ಕೊಟ್ಟಿದ್ದಾರೆ. ಅವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಈ ಮಸೂದೆಯನ್ನು ಪಾಸ್ ಮಾಡಿಕೊಡಬೇಕೆಂದು ನಾನು ಈ ಸಂಧರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ

" 1996: ಮೈಸೂರು(ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 996ರ ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1996ರ ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮು ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಮತ್ತೆ 3.00 ಗಂಟೆಗೆ ಸೇರುವುದು

(ಸಭೆಯು 2.05 ಗಂಟೆಗೆ ಮುಕ್ತಾಯಗೊಂಡು ಮತ್ತೆ 3.00 ಗಂಟೆಗೆ ಸೇರಲು ನಿಶ್ಚಯಿಸಿತು).

(ಸದನ 3.30 ಗಂಟೆಗೆ ಸಭೆ ಪುನ: ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲ್ ಅವರು ಅಧ್ಯಕ್ಷ, ಸ್ಥಾನದಲ್ಲಿ ಉಪಸ್ಥಿತರಾದರು)